■ ತೆಲುಗು ಮೂಲ: ಪೋಲಾಪ್ರಗಡ ಜನಾರ್ದನ ರಾವ್

■ ಕನ್ನಡಕ್ಕೆ : ಯತಿರಾಜ್ ವೀರಾಂಬುಧಿ

ಆ ಮನೆಯಲ್ಲಿ ಕಾಲಿಟ್ಟೊಡನೆ, ನಗುತ್ತಾ ಆಡುತ್ತಿದ್ದ ನಾಲ್ವರು ಮಕ್ಕಳನ್ನು ಪರಿಶೀಲಿಸಿ ನೋಡಿದ ಅಚ್ಯುತರಾಮಯ್ಯ. ಇವರಲ್ಲಿ ತನ್ನ ಮಗ ಯಾರು? ಎತ್ತರಕ್ಕೆ ಬೆಳ್ಳಗಿರುವವನೇ ಇರಬೇಕು... ಅಲ್ಲ... ಅವನಲ್ಲ. ಅವನಿಗೆ ಹಲ್ಲುಬ್ಬು ಎಂದುಕೊಂಡು ತನ್ನ ತುಟಿಗಳ ಹಿಂದೆ ಬಚ್ಚಿಟ್ಟುಕೊಂಡಿದ್ದ ದಾಳಿಂಬೆ ಬೀಜದಂತಹ ಹಲ್ಲುಗಳನ್ನು ನಾಲಗೆಯಿಂದ ಮೃದುವಾಗಿ ಸೋಕಿಸಿ ಹೆಮ್ಮೆಯಿಂದ ನಕ್ಕ.

ಆ ಕಪ್ಪು ಹುಡುಗನೇನೋ? ಅಲ್ಲ ಎಂದು ಅಣಕಿಸಿತು ಅವನ ಬಿಳಿಯ ಬಣ್ಣ. ಹುಡುಕೀ ಹುಡುಕೀ ಆ ಮನೆಗೆ ಬರಬೇಕೆಂದು ಅದೆಷ್ಟು ಒದ್ದಾಡಿದೆನೋ, ಬಂದ ಮೇಲೆ ಯಾಕೆ ಬಂದೆನಪ್ಪಾ? ಎಂದು ಅದಕ್ಕಿಂತ ಹೆಚ್ಚು ಆಂದೋಲನಕ್ಕೊಳಗಾದ.

ಒಂದು ವೇಳೆ ಇವರಲ್ಲಿ... ಮೈಥಿಲಿಗೆ... ಅವನ ಸಂಸ್ಕಾರ ... ಏನಾಯ್ತೋ ನಿನಗೆ? ಪರಮ ದರಿದ್ರನಂತೆ ಆಲೋಚಿಸುತ್ತಿದ್ದೀಯಲ್ಲೋ ಹೆಡ್ಡಾ? ಎಂದಿತು ಅವನ ಅಂತರಾತ್ಮ.

ಆಟದಲ್ಲಿ ಕಳ್ಳ ಸಿಕ್ಕಿಬಿದ್ದಿರಬೇಕು. ನಾಲ್ವರೂ ಚಪ್ಪಾಳೆ ತಟ್ಟಿದರು ಆನಂದದಿಂದ. ಶಿಸ್ತಿನಿಂದ ಕೂಡಿದ ನಿಶ್ಶಬ್ದದ ಆಟ... ತುಂಟತನ. ಆ ಚಪ್ಪಾಳೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ನಿವೇದಿತಳ ನೃತ್ಯ ಪ್ರದರ್ಶನದತ್ತ ಹಿಂದಕ್ಕೆ... ಹಿಂದಕ್ಕೆ ಎಳೆದೊಯ್ದಿತು ಅಚ್ಯುತರಾಮಯ್ಯನ ಆಲೋಚನೆಯನ್ನು.

* * *

ರವೀಂದ್ರ ಕಲಾಕ್ಷೇತ್ರದ ವೇದಿಕೆಯ ಮೇಲೆ ಹದಿನಾರರ ಸುಂದರ ಹುಡುಗಿ ನಿವೇದಿತಳ ನಾಟ್ಯಪ್ರದರ್ಶನ ನಡೆಯುತ್ತಿತ್ತು. ಜನರು ಮುಗ್ಧರಾಗಿ ನೋಡುತ್ತಿದ್ದರು.

ಮೊದಲ ಸಾಲಿನ ಮಧ್ಯೆ ಕುಳಿತಿದ್ದ ಒಬ್ಬ ಐವತ್ತರ ವಯಸ್ಸಿನಾಕೆ ನಟುವಾಂಗಕ್ಕೆ ಅನುಗುಣವಾಗಿ ಅಭಿನಯಿಸುತ್ತಿದ್ದಳು. ಕೈಗಳಿಂದ ಮುದ್ರೆಗಳನ್ನು ಮಾಡುತ್ತಿದ್ದಳು. ತಾಳಕ್ಕೆ ಸರಿಯಾಗಿ ಆಕೆಯ ಪಾದಗಳು ಮೃದುವಾಗಿ ನರ್ತಿಸುತ್ತಿದ್ದವು.

ಮನಸ್ಸು ರಾಗರಂಜಿತವಾದರೆ ಚಪ್ಪಾಳೆ ಹೀಗಿರುತ್ತದೆಂದು, ರವೀಂದ್ರ ಕಲಾಕ್ಷೇತ್ರದ ಪ್ರೇಕ್ಷಕರು ಅಸೆಂಬ್ಲಿ ಹಾಲ್‌ನಲ್ಲಿ, ಹಣ ನೀಡಿ ಚಪ್ಪಾಳೆ ಹೊಡೆಸಿ ಕೊಳ್ಳುವ ನಾಯಕರ ಕಿವಿಗಳ ತುಕ್ಕು ಬಿಟ್ಟುಹೋಗುವಂತೆ ಚಪ್ಪಾಳೆ ಹೊಡೆದರು.

ನೃತ್ಯ ಕಾರ್ಯಕ್ರಮ ಮುಗಿದ ನಂತರ ಪರದೆ ಮೆಲ್ಲಗೆ, ಮೆಲ್ಲಮೆಲ್ಲಗೆ, ಸಂಕೋಚದಿಂದ ಪ್ರೇಕ್ಷಕರಿಗೆ, ರಂಗಸ್ಥಳಕ್ಕೆ ನಡುವೆ ಅಡ್ಡಲಾಗಿ ನಿಂತಿತು.

ಈ ದಿನ ಮುಖ್ಯ ಅತಿಥಿಯಾಗಿ ಬಂದಿರುವ ಐ.ಐ.ಟಿ. ಅಚ್ಯುತರಾಮಯ್ಯ ಅವರನ್ನು ಕುಮಾರಿ ನಿವೇದಿತಳ ಗುರು, ಸುಭದ್ರಾ ಪ್ರಭು ಅವರನ್ನು ಸನ್ಮಾನಿಸಬೇಕೆಂದು ಕೋರುತ್ತೇವೆ ಎಂದು ಘೋಷಣೆ ಕೇಳಿಸಿದೊಡನೆ, ಮುಂದಿನ ಸಾಲಿನಲ್ಲಿ ಕುಳಿತು ಅಭಿನಯಿಸಿದ ಮಹಿಳೆ ಎದ್ದು ವೇದಿಕೆ ಹತ್ತಿದಳು.

ಅಲ್ಲಿಯವರೆಗೆ ಆಕೆಯನ್ನು ಪರೀಕ್ಷಾದೃಷ್ಟಿಯಿಂದ ನೋಡಿದವರು ಈಕೆ ಆ ಹುಡುಗಿಯ ಗುರುವೇನು? ಎಂದು ಮೂಗಿನ ಮೇಲೆ ಬೆರಳಿಟ್ಟುಕೊಂಡರು.

ನಿವೇದಿತಳನ್ನು ವೇದಿಕೆಯ ಮೇಲೆ ಅವಳ ತಾಯಿ ತಂದೆ ಕರೆತಂದರು. ಗುಲಾಬಿ ದಳಗಳನ್ನು ಬೊಗಸೆ ತುಂಬಾ ಹಿಡಿದುಕೊಂಡು ಏನು ಮಾಡಲಿ ಎನ್ನುವಂತೆ ಮುಗ್ಧಳಾಗಿ ನೋಡುತ್ತಿದ್ದಳು ನಿವೇದಿತ.

ಗುರುವಿನ ಪಾದಗಳ ಮೇಲೆ ಸುರಿಯೆಂದು ಸನ್ನೆ ಮಾಡಿದಳು ನಿವೇದಿತಳ ತಾಯಿ. ಮೈಕ್‌ನಲ್ಲಿ ಮಂಗಳವಾದ್ಯ ಮೊಳಗಲಾರಂಭಿಸಿತು. ನಿವೇದಿತಳಿಂದ ಗುರುಪೂಜೆ ಮಾಡಿಸಿದರು.

ಎಷ್ಟೋ ಜನಕ್ಕೆ ಐ.ಐ.ಟಿ.ಯಲ್ಲಿ ಸೀಟು ಬರುವಂತೆ ಕೋಚಿಂಗ್ ನೀಡಿ, ಚಿಕ್ಕ ವಯಸ್ಸಿನಲ್ಲೇ ರಾಜ್ಯಕ್ಕೆ ಹೆಸರು, ಖ್ಯಾತಿ ತಂದ ಅಚ್ಯುತರಾಮಯ್ಯ ಅವರನ್ನು ಎರಡು ಮಾತುಗಳನ್ನಾಡಬೇಕೆಂದು ಕೋರಿಕೊಳ್ಳುತ್ತೇವೆ ಎಂದು ಕಾರ್ಯದರ್ಶಿ ಕೋರಿದೊಡನೆ ಅಚ್ಯುತರಾಮಯ್ಯ ಮೈಕ್ ಬಳಿ ನಡೆದ.

'ಎಲ್ಲರಿಗೂ ನಮಸ್ಕಾರ. ವಜ್ರವೇ ಆದರೂ ಸಾಣೆ ಹಿಡಿಯದೇ ಹೊಳೆಯುವುದಿಲ್ಲ. ಚಿನ್ನವನ್ನು ಒರೆಗೆ ಹಚ್ಚದೇ ಥಳಥಳ ಎನ್ನುವುದಿಲ್ಲ. ನಾವು ಮಾಡುವ ಕೆಲಸವೆಲ್ಲಾ ವಿದ್ಯಾರ್ಥಿಗಳು ಚಿನ್ನವೋ, ವಜ್ರವೋ ಕಂಡುಹಿಡಿದು ಕೋಚಿಂಗ್ ನೀಡುವುದಷ್ಟೇ. ಕುಮಾರಿ ನಿವೇದಿತಳಿಗೆ, ಆಕೆಯ ಗುರುವಿಗೆ ಅಭಿನಂದನೆಗಳು. ಇಷ್ಟು ಒಳ್ಳೆಯ ಕಾರ್ಯಕ್ರಮ ನಿರ್ವಹಿಸಿದ ಈ ಸಂಸ್ಥೆಗೆ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ದಾನವಾಗಿ ನೀಡುತ್ತಿದ್ದೇನೆ' ಎಂದು ಮುಗಿಸಿದ.

ಕುಮಾರಿ ನಿವೇದಿತಳ ಬಗ್ಗೆ ಮಾತನಾಡಲು ಆಕೆಯ ಗುರು ಸುಭದ್ರಾ ಪ್ರಭು ಮೈಕಿನ ಬಳಿಗೆ ಬಂದಳು.

ಸಭೆಗೆ ನಮಸ್ಕಾರ. ನಿವೇದಿತಳ ಬಗ್ಗೆ ನಿಮಗೆ ತಿಳಿಯದ ಗುಟ್ಟೊಂದನ್ನು ಹೇಳುತ್ತೇನೆ. ಅದನ್ನು ನಾಟ್ಯಪ್ರದರ್ಶನಕ್ಕೆ ಮೊದಲು ಘೋಷಣೆ ಮಾಡ ಬೇಡಿರೆಂದು ವ್ಯವಸ್ಥಾಪಕರಿಗೆ ನಾನೇ ವಿನಂತಿಸಿಕೊಂಡಿದ್ದೆ.

ಹತ್ತು ವರ್ಷಗಳ ಹಿಂದೆ ನಾನು ವಿಕಲಚೇತನರ ಪಾಠ ಶಾಲೆಯ ವಾರ್ಷಿಕೋತ್ಸವಕ್ಕೆ ಮುಖ್ಯ ಅತಿಥಿಯಾಗಿ ಹೋಗಿದ್ದೆ. ಅಲ್ಲಿ ಓದುತ್ತಿದ್ದ ಮಕ್ಕಳಿಗೆ ಓಟದ ಸ್ಪರ್ಧೆ ಏರ್ಪಡಿಸಿದ್ದರು. ಮಕ್ಕಳು ಓಡಲಾರಂಭಿಸಿದರು. ಅಷ್ಟರಲ್ಲಿ ಒಬ್ಬ ಹುಡುಗ ಓಡಲಾರದೇ ಬಿದ್ದುಬಿಟ್ಟ. ಅಳಲಾರಂಭಿಸಿದ. ಅದನ್ನು ನೋಡಿ ಒಂದು ಹುಡುಗಿ ಹಿಂದಕ್ಕೆ ಬಂದಳು. ಮಾನಸಿಕವಾಗಿ ಬೆಳೆದಿರದ ಆ ಹುಡುಗಿ ಬಿದ್ದಿದ್ದ ಆ ಹುಡುಗನನ್ನು ಎಬ್ಬಿಸಿ ಮುತ್ತಿಟ್ಟಳು. ಅದನ್ನು ನೋಡಿ ಉಳಿದ ಮಕ್ಕಳು ಹಿಂದಕ್ಕೆ ಬಂದರು. ಎಲ್ಲರೂ ಸೇರಿ ನಗುತ್ತಾ, ಗಲಾಟೆ ಮಾಡುತ್ತಾ ಓಡಿದರು. ಆ ದಿನ ಮುತ್ತಿಟ್ಟ ಹುಡುಗಿಯೇ ಇಂದು ನಿಮ್ಮ ಮುಂದೆ ಮುಗ್ಧ ಮನೋಹರವಾಗಿ ನೃತ್ಯ ಮಾಡಿದ ನಿವೇದಿತ.

ಸಭಾಂಗಣ ಚಪ್ಪಾಳೆಗಳಿಂದ ತುಂಬಿತು. ಸುಭದ್ರಾ ಪ್ರಭು ನಿಟ್ಟುಸಿರಿಟ್ಟಳು. ನಿಮ್ಮ ಚಪ್ಪಾಳೆ ನಿವೇದಿತಳಿಗೆ ಕೇಳಿಸಿಲ್ಲ. ಬಾಯ್ತೆರೆದು ನಿಮಗೆ ಅವಳು ಕೃತಜ್ಞತೆಗಳನ್ನು ಹೇಳಲಾರಳು. ಆದರೆ ಭಗವಂತ ಅವಳಿಗೆ ಅಪರೂಪವಾದ ರೂಪ ನೀಡಿದ್ದಾನೆ.

ನಾನು ಮುಂದಿನ ಸಾಲಿನಲ್ಲಿ ಕುಳಿತು ಅಭಿನಯ ಮಾಡುತ್ತಿದ್ದರೆ, ಹಾವಭಾವಗಳೊಂದಿಗೂ ಸಹ, ಚಾಚೂ ತಪ್ಪದಂತೆ ನನ್ನನ್ನು ಅನುಕರಿಸುತ್ತಾಳೆ. ಅವಳು ನಿಶ್ಶಬ್ದ ಜ್ಞಾನಿ.

ಮೊದಲೇ ಈ ವಿಷಯವನ್ನು ನಿಮಗೆ ಹೇಳಿದರೆ ಸಹಾನುಭೂತಿಯಿಂದ ಚಪ್ಪಾಳೆ ಹೊಡೆಯುತ್ತಿದ್ದಿರಿ. ಅವಳಿಗೆ ಬೇಕಾಗಿರುವುದು ನಿಮ್ಮ ಸಹಾನುಭೂತಿಯಲ್ಲ, ನಿಮ್ಮ ಅನುಭೂತಿ, ನಿಮ್ಮ ಪ್ರೋತ್ಸಾಹ, ನಿಮ್ಮ ಆಶೀರ್ವಾದ.

ಆಕೆಯನ್ನು ನನ್ನ ಶಿಷ್ಯೆಯನ್ನಾಗಿ ಮಾಡಿಕೊಳ್ಳಲು ಪರೋಕ್ಷವಾಗಿ ಸಹಾಯ ಮಾಡಿದ ಅನೇಕ ಕೋಚಿಂಗ್ ಸೆಂಟರ್‌ಗಳಿಗೆ ಮೊದಲು ನನ್ನ ಕೃತಜ್ಞತೆಗಳನ್ನು ಹೇಳಬೇಕು. ಏಕೆಂದರೆ ಕೆಲವು ವರ್ಷಗಳ ಹಿಂದೆ ನನ್ನ ಮಗನನ್ನು ಕರೆದುಕೊಂಡು ಐ.ಐ.ಟಿ. ಕೋಚಿಂಗ್ ಸಂಸ್ಥೆಗೆ ಹೋದೆ. ಅವರು ನನ್ನ ಮಗನ ಮಾರ್ಕ್‌ಗಳನ್ನು ನೋಡಿ ನೀನು ಐ.ಟಿ.ಐ.ಗೆ ಕೆಲಸಕ್ಕೆ ಬರುತ್ತೀ ಎಂದು ವ್ಯಂಗ್ಯವಾಗಿ ಮಾತಾಡಿದರು.

ಅವರ ಮಾತುಗಳಿಂದ ನನಗೂ ಅವನಿಗೂ ಹಟ ಉಂಟಾಯಿತು. ಪ್ರತಿಭೆಗೆ ಅಂಕಗಳು ಮಾತ್ರವೇ ಅಳತೆಗೋಲಲ್ಲವೆಂದೂ, ಜ್ಞಾನವೇ ಮುಖ್ಯವೆಂದೂ ಕೃಷಿ, ಏಕನಿಷ್ಠ ಸಾಧನೆ ಅಗತ್ಯ ಎಂದೂ, ಅವು ಪ್ರತಿ ವಿದ್ಯಾರ್ಥಿಯಲ್ಲಿಯೂ ನಿಕ್ಷಿಪ್ತವಾಗಿ ಇರುವುದೆಂದೂ ತಿಳಿದುಕೊಂಡೆವು. ಆ ಪ್ರತಿಭೆಯನ್ನು ಹೊರಕ್ಕೆ ತರಲು ಪ್ರಯತ್ನಿಸುತ್ತಿದ್ದೇವೆ ನಾನೂ, ನನ್ನ ಮಗ.

ದೀಪವನ್ನು ಬೆಳಗಿಸಲು ಪಂಜಿನ ಅಗತ್ಯವಿಲ್ಲ. ಚಿಕ್ಕ ಬೆಂಕಿಯ ಕಿಡಿ ಸಾಕು. ಜೇಡಿ ಮಣ್ಣೆಂದು ಬಿಸಾಡುವ ಅಗತ್ಯವಿಲ್ಲ. ನಿಧಾನವಾಗಿ ನಿಗ್ರಹವಾಗಿ ಮಾಡಿದರೆ ಪೂಜಿಸುವ ವಿಗ್ರಹ ಆಗುತ್ತದೆ.

ನನ್ನ ಆಸೆ ನಿವೇದಿತಳ ರೂಪದಲ್ಲಿ ಸ್ವಲ್ಪ ಮಟ್ಟಿಗೆ ನೆರವೇರಿದೆ. ನನ್ನ ಆಶಯವು ನಿಮ್ಮೆಲ್ಲರ ಪ್ರೋತ್ಸಾಹದಿಂದ ನೆರವೇರಲಿದೆ ಎನ್ನುತ್ತಾ ಸುಭದ್ರಾ ಪ್ರಭು ಪ್ರೇಕ್ಷಕರಿಗೆ ನಮಸ್ಕರಿಸಿದಳು. ಅವಳನ್ನು ನೋಡಿ ನಿವೇದಿತ ಕೂಡ ನಮಸ್ಕರಿಸಿದಳು. ಪ್ರೇಕ್ಷಕರ ಚಪ್ಪಾಳೆ ಈ ಸಲ ಪ್ರಾರ್ಥನಾ ರೂಪದಲ್ಲಿ ಕೋಟೆಯ ಶ್ರೀನಿವಾಸನಿಗೆ ಕೇಳಿಸಿತ್ತು.